# ಹೆಣ್ಣು ಹದ್ದಿನ ಸ್ವಯಂವರ: ಆಧುನಿಕತೆ ಹಾಗೂ ಸ್ತ್ರೀವಾದವನ್ನು ಅನುಲಕ್ಷಿಸಿ

**ಸೌಮ್ಯ ವಿ.**

ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಬಿ.ಎಮ್.ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಿ.ವಿ. ಪುರಂ, ಬೆಂಗಳೂರು.

**Received: 18-05-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672703**

**ABSTRACT:**

ಬಾನು ಮುಶ್ತಾಕ್ ರವರ ಬಹುತೇಕ ಕತೆಗಳು ಮಹಿಳೆಯ ಬದುಕಿನ ಕುರಿತು ಆಶಾವಾದವನ್ನು ಹೊಂದಿವೆ. ಇತ್ತೀಚೆಗೆ ಬಿಡುಗಡೆಯಾದ ಅವರ ಕಥಾಸಂಕಲನ 'ಹೆಣ್ಣು ಹದ್ದಿನ ಸ್ವಯಂವರ' ದಲ್ಲಿನ ಇದೇ ಶಿರ್ಷಿಕೆಯ ಕತೆ ಆಧುನಿಕತೆ ಹಾಗೂ ಸ್ತ್ರೀವಾದಗಳ ನೈತಿಕತೆಯ ಹುಡುಕಾಟದಲ್ಲಿ ತೊಡಗಿರುವ ಆಶಾವಾದವನ್ನು ಝುಳಪಿಸಿದ ಕತೆಯೆಂದೆ ಅನಿಸಿದೆ. ಇಲ್ಲಿ ಅನ್ಯ ಬದುಕಿನಿಂದ ಪಡೆದುಕೊಂಡ ಆಧುನಿಕತೆ ಹಾಗೂ ಸಹಜ ಸಂವೇದಿತ ಆಧುನಿಕತೆ – ಇವೆರಡೂ ಸಹ ಪರಸ್ಪರ ಪ್ರಭಾವಕ್ಕೆ, ಪ್ರಚೋದನೆಗೆ ಒಳಗಾಗಿರುವಂತಿದೆ. ಇಂದು ಕಂಡುಬರುತ್ತಿರುವ ಸೃಜನಶೀಲತೆ ಮತ್ತು ಸ್ವಂತಿಕೆಯ ಹೊಸ ಬದುಕಿನ ದೃಷ್ಟಿಕೋನವು ಇಲ್ಲಿದೆ. ಅಲ್ಲದೆ, ಸ್ತ್ರೀವಾದಿ ಚಿಂತನೆಯ ತಾತ್ವಿಕತೆಯಾದ ಪ್ರಜ್ಞೆಯ ಜಾಗೃತಿ ಹಾಗೂ ಸ್ವಾಭಿವ್ಯಕ್ತಿಯ ಜಿಜ್ಞಾಸೆಯೂ ಇಲ್ಲಿ ಒಡಮೂಡಿದೆ. ಲೇಖಕಿಯ ಹೆಣ್ಣಿನ ಅಸ್ತಿತ್ವದ ಭರವಸೆಯ ಕನಸು ಹಾಗೂ ಬದಲಾಗಬಹುದಾದ ಭವಿಷ್ಯದ ಎಚ್ಚರಿಕೆ ಇಲ್ಲಿದೆ. ಒಂದು ಕಾಲದಲ್ಲಿ ಗಂಡಿನ ಮೇಲುಗೈ, ಮತ್ತೊಂದು ಕಾಲಕ್ಕೆ ಹೆಣ್ಣಿಗೆ ಮನ್ನಣೆ. ಮನುಷ್ಯನ ಪ್ರಜ್ಞಾ ಪೂರ್ವಕ ಪ್ರಯತ್ನದಿಂದ ಮಾತ್ರ ಇಬ್ಬರೂ ಸಮಾನರು ಎಂಬ ಚಿಂತನೆಯನ್ನು ನೆಲೆಗೊಳಿಸಲು ಸಾಧ್ಯ.

**KEYWORDS:**

ಆಧುನಿಕತೆ, ತಂತ್ರಜ್ಞಾನ, ಸ್ತ್ರೀವಾದ, ಹೆಣ್ಣು-ಗಂಡು, ಸಮಾನತೆ.

'ಹೆಣ್ಣು ಹದ್ದಿನ ಸ್ವಯಂವರ' ಕತೆಯಲ್ಲಿ ನಿರೂಪಿತ ಸನ್ನಿವೇಶ 2038 ನವೆಂಬರ್ 18ರಲ್ಲಿ ಘಟಿಸುವಂತಹದ್ದು. ಆ ಸಮಯದ ಹೊತ್ತಿಗೆ ಅನೇಕ ಬದಲಾವಣೆಗಳು ನೆಲೆಗೊಂಡು, ಹೆಣ್ಣು-ಗಂಡುಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಗಳು ಸಹಜವೆಂಬಂತೆ ಉಂಟಾಗಿರುತ್ತವೆ ಎಂಬ ದೃಷ್ಟಿ ಲೇಖಕಿಯದು. ಪ್ರಸ್ತುತ ವಿಜ್ಞಾನ, ತಂತ್ರಜ್ಞಾನದ ಬೆನ್ನಟ್ಟುತ್ತಿರುವ ಮನುಷ್ಯನ ಬದುಕು, ಮುಂದಿನ ದಶಕಗಳಲ್ಲಿನ ಮನುಷ್ಯನ ನಡೆಯನ್ನು ರುಜುವಾತು ಮಾಡಿದಂತಿದೆ. ಇದುವರೆಗಿನ ತಿಳುವಳಿಕೆಗಳಾಚೆ ಯೋಚಿಸಬಹುದಾದ ಸಾಧ್ಯತೆಗಳು ಮುಂದಿನ ಭವಿಷ್ಯದ ಘಟನೆಗಳ ಮೂಲಕ ವ್ಯಕ್ತವಾಗಿವೆ. ಈ ಮೂಲಕ ಲೇಖಕಿಯ ವ್ಯಕ್ತಿತ್ವವು ಸಮಾಜದ ಆವರ್ತನೆ/ಪರಿವರ್ತನೆಯನ್ನು ಕಂಡುಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿದೆ.

ಈ ಹಿನ್ನಲೆಯಲ್ಲಿ ಕತೆಯ ವಿಶ್ಲೇಷಣೆಯ ಅನುಕೂಲಕ್ಕಾಗಿ ಗುರುತಿಸಿಕೊಂಡ

ಅಂಶಗಳು ಹೀಗಿದೆ:

1. ಸ್ತ್ರೀವಾದಿ ಚಿಂತನೆಗಳು: ಅಸ್ತಿತ್ವದ ಆಶಾವಾದಿ ನೆಲೆ
2. ಆಧುನಿಕತೆ ಮತ್ತು ಸಹಜತೆ
3. ಆಧುನಿಕತೆ: ಮಹಿಳೆಯ ಅಂತರಂಗದ ಗಟ್ಟಿ ದನಿ

**1. ಸ್ತ್ರೀವಾದಿ ಚಿಂತನೆಗಳು: ಅಸ್ತಿತ್ವದ ಆಶಾವಾದಿ ನೆಲೆ**

ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಇದು ಸ್ತ್ರೀ-ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಒತ್ತಾಯಿಸುತ್ತದೆ. ಅಲ್ಲದೆ ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀ-ಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೆ ಸ್ತ್ರೀವಾದದ ಮುಖ್ಯವಾದ ಕಾರ್ಯವಿಧಾನವಾಗಿದೆ.

'ಹೆಣ್ಣು ಹದ್ದಿನ ಸ್ವಯಂವರ' ಕತೆಯಲ್ಲಿ ಕತೆಗಾರ್ತಿ ಈ ಸ್ತ್ರೀವಾದಿ ಆಲೋಚನೆಗಳು ಮುಂದಿನ ದಶಕದಲ್ಲಿ ಸಾಕಾರಗೊಂಡಂತೆ ಕತೆಯನ್ನು ಚಿತ್ರಿಸಿದ್ದಾರೆ. ಇಂದಿನ ಹೆಣ್ಣು ಭ್ರೂಣ ಹತ್ಯೆಯ ಪರಿಣಾಮಗಳ ಫಲಶೃತಿಯನ್ನು ಈ ಕತೆ ಚಿತ್ರಿಸಿದೆ. ಕತೆಯ ಮುಖ್ಯಪಾತ್ರಧಾರಿ ಅಮರ್ "ಆರಂಕಿಯ ಸಂಬಳದ ಸ್ಪುರದ್ರೂಪಿ ಯುವಕ; ಕಾರು, ಬಂಗಲೆ ಜೊತೆಗೆ ಮೂವತ್ತೆರಡರ ಯೌವನ... ಆದರೆ ನೆತ್ತಿಯ ಮೇಲೆ ತೆಳುವಾದ ಕೂದಲು. ಎಷ್ಟೊಂದು ವೃತ್ತ ಪತ್ರಿಕೆಗಳಲ್ಲಿ ಅವನು ಜಾಹೀರಾತು ನೀಡಲಿಲ್ಲ... ಎಷ್ಟೊಂದು ವೆಬ್‌ಸೈಟ್‌ಗಳಲ್ಲಿ ಅವನು ವಧುವಿನ ಅನ್ವೇಷಣೆಯನ್ನು ನಡೆಸಲಿಲ್ಲ." ಆದರೂ ಅವನಿಗೆ ಮದುವೆಗೆ ಒಂದು ಹೆಣ್ಣು ದೊರೆಯಲಿಲ್ಲ. ಹಾಗಾಗಿ ಆತ ತನ್ನ ಹಿಂದಿನ ತಲೆಮಾರಿನವರನ್ನು ದೂಷಿಸುತ್ತಾನೆ. ಬಹಳ ಪ್ರಯತ್ನದ ನಂತರ ತನಗಿಂತ ಹಿರಿಯಳಾದ ನೀತಿಯನ್ನು ತನ್ನ ಭಾಗ್ಯವೆಂದೇ ವಿವಾಹವಾಗುತ್ತಾನೆ. ಅಲ್ಲದೆ ತನಗೆ ಮಗುವಾಗುವುದಾದರೆ ಹೆಣ್ಣು ಮಗು ಜನಿಸಬೇಕೆಂದು ಆಶಿಸುತ್ತಾನೆ. ಇದೇ ಕಾರಣಕ್ಕೆ ಇರ್ಫಾನ್ ಖಾನ್, ಕೃಷಿಕ ಕೇಶವ ಈಗಾಗಲೇ ಇಬ್ಬರು ಹೆಣ್ಣು ಮಕ್ಕಳಿದ್ದರೂ, ಹೆಣ್ಣು ಮಗುವಿನ ಜನನದಿಂದ ತಮಗಾಗಬಹುದಾದ ಲಾಭಕ್ಕಾಗಿ ಮತ್ತೊಂದು ಹೆಣ್ಣು ಮಗುವನ್ನು ಬಯಸುತ್ತಾರೆ. ಗಂಡು ಮಗು ಕುರಿತು ತಿರಸ್ಕಾರ ಭಾವ ಹೊಂದಿದ್ದಾರೆ. ವ್ಯಾಪಾರಿ ಜೀವರಾಜ್‌ಗೆ ಇಬ್ಬರೂ ಗಂಡು ಮಕ್ಕಳು. ಎರಡನೇಯವ ಜನಿಸಿದಾಗ ಜನ ಕೃತಿಯಲ್ಲಿ ಮತ್ತು ನಡವಳಿಕೆಯಲ್ಲಿ ಸಂತಾಪವನ್ನು ಸೂಚಿಸುತ್ತಾರೆ. ಇಲ್ಲಿ ಗಂಡನ್ನು ಅಪಶಕುನದಂತೆ ಕಂಡಂತಿದೆ. ಇಂದು ಹೆಣ್ಣು ಯಾವೆಲ್ಲ ಮಾನದಂಡಗಳಿಂದ ಅಳೆಯಲಾಗುತ್ತಿದೆಯೋ, ಅದೇ ಮಾನದಂಡಗಳು ಭವಿಷ್ಯದಲ್ಲಿ ಗಂಡನ್ನು ಅಳೆಯುವಂತಾಗುತ್ತದೆ ಎಂಬ ಪ್ರಜ್ಞಾಪೂರ್ವಕವಾದ ಎಚ್ಚರಿಕೆಯ ಧ್ವನಿ ಇಲ್ಲಿದೆ. ಸಮಾಜ ಹೆಣ್ಣು–ಗಂಡುಗಳ ಸಮಾನತೆಯ ಪರಿಕಲ್ಪನೆಗಳನ್ನು ರೂಢಿಸಿಕೊಳ್ಳದೇ ಇದ್ದಲ್ಲಿ ಈ ಅಸಮಾನತೆ ಆವರ್ತ, ಪ್ರತ್ಯಾವರ್ತಗೊಳ್ಳುತ್ತಲಿರುತ್ತದೆ ಎಂಬ ಸೂಚನೆಯೂ ಇದೆ.

ಪಿತೃಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಕಡೆಗಣಿಸಿ, ಗಂಡಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತದೆ. ಇದು ಮುಂದುವರೆದಂತೆ ಹೆಣ್ಣು ನಿರ್ಲ್ಯಕ್ಷದಂಚಿನೆಡೆಗೆ ಸಾಗಿ

ನಾಮಶೇಷವಾಗುತ್ತಾಳೆ. ಇಲ್ಲಿಯೂ ನಿರೂಪಕಿ ಅಂತಹದ್ದೇ ಒಂದು ಸನ್ನಿವೇಶಕ್ಕೆ ಓದುಗರನ್ನು ಮುಖಾಮುಖಿಗೊಳಿಸಿದ್ದಾರೆ. ಅಮರ್, ಇರ್ಫಾನ್ ಆದಿಯಾಗಿ ಹೆಣ್ಣು ಮಗು ಜನನದ ಕುರಿತ ಕಾಳಜಿ, ಹೆಣ್ಣು ಮಕ್ಕಳ ಸಂಖ್ಯೆ ಶೋಚನೀಯವಾಗಿರುವುದು ಹಾಗೂ ಉತ್ತೇಜಿಸಲು ಸರಕಾರ ಯೋಜಿಸಿರುವ ಲಾಭದಾಯಕ ಯೋಜನೆಗಳೆ ಕಾರಣವಾಗಿವೆ. ಇಲ್ಲಿಯೂ ಸಹ ಸಂತಾನೋತ್ಪತ್ತಿಯ ಸಂಕೇತವಾಗಿಯೇ ಹೆಣ್ಣನ್ನು ಕಾಣಲಾಗುತ್ತದೆ. ಅದು ಸಮಾನತೆ ಸ್ವಾತಂತ್ರ್ಯದ ದೃಷ್ಟಿಯಿಂದಲ್ಲ ಎಂಬುದು ಗಮನಾರ್ಹವಾದುದು.

ಕೆರೋಲ್ ಗಿಲ್ಲಗಾನ್ "ಸ್ತ್ರೀಯನ್ನು ಪುರುಷರಿಗಿಂತ ಭಿನ್ನವಾಗಿ ಗುರುತಿಸಲು ಒಂದು ಮುಖ್ಯ ಸ್ಥಾನ 'ತಾಯ್ತನ'. ಆದರೆ ಅದೇ ಲಿಂಗಪ್ರಭೇದ, ಶ್ರೇಣಿಕರಣ, ಯಜಮಾನಿಕೆ ಮತ್ತು ಶೋಷಣೆಗಳಿಗೂ ಮೂಲನೆಲೆಯಾಗಿದೆ. ನೇತ್ಯಾತ್ಮಕ ನೆಲೆಯನ್ನು ಹೆಣ್ಣಿನ ನೈತಿಕತೆ ಮತ್ತು ಹಿರಿಮೆಯ ನೆಲೆಯೆಂದು ಪ್ರತಿಪಾದಿಸುವ ಯತ್ನವಾಗಿ 'ಮಾತೃತ್ವ ಸಿದ್ಧಾಂತ' (Motherhood Theory)ವನ್ನು ಸ್ತ್ರೀವಾದಿಗಳು ಬಲವಾಗಿ ಎತ್ತಿಹಿಡಿಯುತ್ತಾರೆ. ಹೆಣ್ಣಿನ ಭಿನ್ನತೆ, ಆಕೆಯ ರಕ್ಷಕಗುಣ, ಸಂವೇದನಾ ಸೂಕ್ಷ್ಮತೆ, ಸಂತೈಸುವ ಉಪಶಮಕಾಶಕ್ತಿ ಮತ್ತು ಜವಾಬ್ದಾರಿತನಗಳು, ಅವಳ ನೈತಿಕ ಹಿರಿಮೆಯ ಜೊತೆಗೂಡಿ ಸ್ತ್ರೀವಿಶಿಷ್ಟವಾದ ಧ್ವನಿಯೊಂದನ್ನು ಹೆಣ್ಣಿಗೆ" ನೀಡುತ್ತದೆ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ತಂದೆಯಾರೆಂಬುದೇ ತಿಳಿಯದ ಅಮರ್‌ನ ತೀವ್ರ ಹಳಹಳಿಕೆಗೆ ತಾಯ್ತನದ ಶಕ್ತಿ ಆಸರೆಯಾಗಿ ಕಾಪಿಡುತ್ತದೆ. ಅವನ ಆರೋಗ್ಯದ ಸಮಸ್ಯೆಗಳು ಹಾಗೂ ತಂದೆಯ ನೆನೆಪು, ತಾನು ತಂದೆಯಾಗಲಿರುವುದು ಖುಷಿಯೊಂದಿಗೆ ದುಗುಡವನ್ನು ತಂದೊಡ್ಡುತ್ತದೆ. ನೀತಿ ಈ ದುಗುಡವನ್ನು ಮೊದಲೇ ಅರಿತವಳಾಗಿ ಅವನಿಗಾಗಿ ಹೈಟೆಕ್ ಆಸ್ಪತ್ರೆಯ 'ಎಕ್ಸ್‌ಪೆಕ್ಟೆಂಟ್ ಫಾದರ್ಸ್'ನ ಐಶಾರಾಮಿ ಕೊಠಡಿ ಪಡೆಯುವಳು. ಪತ್ನಿ ತನ್ನ ಹೆರಿಗೆಯ ಬೇನೆಯಲ್ಲಿಯೂ ಗಂಡನ ಆರೈಕೆ ಮಾಡುವ ಹೊಣೆಗಾರಿಕೆ ತನ್ನದೇ, ಸ್ವೀಕಾರಾರ್ಹ ಎಂದೇ ಭಾವಿಸಿದ್ದಾಳೆ. ಹೆಣ್ತನಕ್ಕೆ ಆರೋಪಿಸಲಾದ ಕಾಳಜಿ ಮಮತೆಯ ಗುಣ ಕಾಲಾತೀತವಾದದು ಎಂಬ ಸಾಮಾಜಿಕ ಗ್ರಹಿಕೆಯ ನಿರೂಪಣೆ ಇಲ್ಲಿದೆ.

## 2. ಆಧುನಿಕತೆ ಮತ್ತು ಸಹಜತೆ

ನಗರದ ಬದುಕಿನ ಬದಲಾದ ಗ್ರಹಿಕೆಗಳನ್ನೂ ಕತೆ ಒಳಗೊಂಡಿದೆ. ಇಲ್ಲಿ ಅನ್ಯ ಬದುಕಿನಿಂದ ಪಡೆದುಕೊಂಡ ಆಧುನಿಕತೆ ಹಾಗೂ ಸಹಜ ಸಂವೇದಿತ ಆಧುನಿಕತೆ – ಇವೆರಡೂ ಸಹ ಪರಸ್ಪರ ಪ್ರಭಾವಕ್ಕೆ , ಪ್ರಚೋದನೆಗೆ ಒಳಗಾಗಿರುವಂತಿದೆ. ಆಧುನಿಕತೆ ಎಂಬ ಪರಿಕಲ್ಪನೆಯು ಇಂದು ಭೌತಿಕವಾಗಿ ಜೀವನದ ಸುಧಾರಣೆಯೆಂಬುದರಿಂದ ಹೊರಳಿತು. ಮನುಷ್ಯನ ಅಂತರ್ಯದಲ್ಲಿನ ಬಯಕೆಗಳ ಪೂರೈಕೆಗಳ ನಿಟ್ಟಿನಲ್ಲಿ ಸಹಾಯಕವಾಗಿ ಪರಿಗಣಿತವಾಗುತ್ತಿದೆ. ಆಧುನಿಕ ಸಾಧನ, ಸಾಮಗ್ರಿಗಳನ್ನು ಜೀವನಕ್ಕೆ ಆಹ್ವಾನ ಮಾಡಿಕೊಳ್ಳುವುದೇ ಪ್ರಗತಿ, ಬೆಳವಣಿಗೆ 'ಆಧುನಿಕತೆ' ಎಂದು ಅರ್ಥೈಸಲಾಗುತ್ತಿದೆ.

ನೀತಿ ವಿದ್ಯಾವಂತ ಹೆಣ್ಣು , ಜೆನೆಟಿಕ್ ಎಂಜಿನೀರಿಂಗ್ ವಿಭಾಗದಲ್ಲಿ ಸ್ನಾತಕೋತ್ತರ ಪದವೀಧರೆ. ಅಮರ್‌ನ ಆರೋಗ್ಯದ ಸಮಸ್ಯೆಯ ನಡುವೆ ಸಂಸಾರದ ನೊಗವನ್ನು ಹೆಗಲೇರಿಸಿಕೊಂಡವಳು. ಮತ್ತು ಯಾವಾಗಬೇಕಾದರೂ ಅವಳು ಮುಲಾಜಿಲ್ಲದೆ ತನ್ನ

ಜವಾಬ್ದಾರಿಯನ್ನು ಕೊಡವಿಕೊಳ್ಳಬಹುದಾಗಿತ್ತು. ಆದರೆ ಈಕೆ ಹೀಗಾಗದಂತೆ ಶತಪ್ರಯತ್ನ ಮಾಡುತ್ತಿದ್ದಾಳೆ. ಹೈಟೆಕ್ ಆಸ್ಪತ್ರೆಯ ಎಕ್ಸ್‌ಪೆಕ್ಟೆಂಟ್ ಫಾದರ್ಸ್‌ನ ಐಶಾರಾಮಿ ಕೊಠಡಿಯಲ್ಲಿ ಅವನ ಆರೋಗ್ಯ ಸುಧಾರಿಸಲು ಬೇಕಾದ ಕಾಳಜಿಯೆಲ್ಲವನ್ನು ವಹಿಸಿದ್ದಾಳೆ. ನೀತಿ ತನ್ನ ಮೂವತ್ತೈದನೇ ವಯಸ್ಸಿನಲ್ಲಿ ನಾರ್ಮಲ್ ಹೆರಿಗೆಯಾಗುವುದು ಕಷ್ಟವೆಂದು ತಿಳಿದೂ, ನಾರ್ಮಲ್ ಹೆರಿಗೆ ಆಗಲೇಬೇಕೆಂದು ಹಠತೊಟ್ಟಿದ್ದಾಳೆ. ತಾನು ಏಳು ತಿಂಗಳ ಗರ್ಭಿಣಿಯಾಗಿದ್ದಾಗ ಗಂಡನೊಂದಿಗೆ ಸಾಮಾನ್ಯ ಗ್ರಾಮೀಣ ಪತಿ ಪತ್ನಿಯಂತೆ ಕಾಲ ಕಳೆಯಬೇಕೆಂದು ಬಯಸಿದ್ದಳು. ಅದಕ್ಕಾಗಿಯೇ ಪೂರ್ವಭಾವಿಯಾಗಿ ರೆಸಾರ್ಟವೊಂದನ್ನು ಮೂರು ದಿನಗಳ ಮಟ್ಟಿಗೆ ಕಾಯ್ದಿರಿಸಿದ್ದಳು. ಅಡುಗೆ, ಟಿ.ವಿ., ಮೊಬೈಲ್, ಲಾಪ್ ಟಾಪ್‌ಗಳಿಂದ ಮುಕ್ತಿ ಹೊಂದಿ ಆರಾಮದಾಕ ಗಂಡ ಹೆಂಡತಿಯಾಗಿ ಬದುಕಲು ಎಣಿಸಿದ್ದಳು. ನೀತಿಯು ಸಹಜ ಬದುಕು ಗ್ರಾಮೀಣ ಬದುಕು, ಸಹಜತೆ ಅಥವಾ ಹಳತು ಆಧುನಿಕತೆಗಿಂತಲೂ ಭಿನ್ನವಾದುದು, ವಿಶಿಷ್ಟವಾದುದೆಂಬುದು ಅವಳ ನಿಲುವು; ತಾನು ಜೆನೆಟಿಕ್ ಎಂಜಿನಿಯರಿಂಗ್ ಪಥವೀದರೆಯಾಗಿದ್ದು ಸಹಜವಾದ ಗರ್ಭಧಾರಣೆ ಹಾಗೂ ಹೆರಿಗೆಗಾಗಿನ ಹಂಬಲ. ಆಧುನಿಕತೆಗೆ ಮೈ ಚಾಚಿಕೊಂಡವರ ಆಳದಲ್ಲಿ ಸಹಜತೆನ್ನು ಮೈದುಂಬಿಸುಕೊಳ್ಳು ಹೊಯ್ದಾಟದಲ್ಲಿ ಬದುಕುತ್ತಿರುವ ಆಧುನಿಕ ಮಹಿಳೆಯ ಸಂಕೇತವಾಗಿ ಗೋಚರಿಸುವಳು.

ಅಮರ್ “ಕಾಲಕ್ಕೆ ಅನುಗುಣವಾಗಿ ಎಲ್ಲರಂತೆ ನಡೆದುಕೊಳ್ಳಬೇಕಾದುದು ಅಗತ್ಯ”ವೆಂದೇ ನಂಬಿದ್ದ. ಆ ನೆಲೆಯಲ್ಲಿ ಆಪರೇಷನ್ ಮಾಡಿಸಿಕೊಳ್ಳಲು ನೀತಿಯನ್ನು ಒತ್ತಾಯಿಸಿದ್ದ. ನಿಹಾರಿಕಾಳ ‘ಡಿಸೈನರ್ ಬೇಬಿ’ ನಿರ್ಧಾರವನ್ನು ಆ ನಿಟ್ಟಿನಲ್ಲಿ ಪ್ರಸ್ತಾಪಿಸಿದ್ದ, ಇದು ನೀತಿಯನ್ನು ಬಹುವಾಗಿ ವಿಚಲಿತಗೊಳಿಸಿತು. ಆಕೆ ಇನ್ನಿಲ್ಲದಂತೆ ಬದುಕಲೆಳೆಸಿದ್ದ ಗ್ರಾಮೀಣ ಬದುಕಿನಾಳಕ್ಕೆ ಇಳಿಯದಾದಳು. ತನ್ನೆಲ್ಲ ನಿರ್ಬಂಧಗಳನ್ನು ತಾನೇ ಮುರಿದು ಅಂತರ್ ಲೋಕದಿಂದ ಬಹಿರ್ ಲೋಕದಲ್ಲಿ ಮಗ್ನಳಾದಳು. ಇದು ತನ್ನ ಸಹಜ ಬದುಕನ್ನು ಅಮರ್ ಸಂಶಯಾತ್ಮಕವಾಗಿ ನೋಡುತ್ತಿರುವಂತೆ ತೋರುತ್ತದೆ. ಹಾಗಾಗಿ ಆಕೆ ನಾರ್ಮಲ್ ಹೆರಿಗೆಯ ಮೂಲಕ ತನ್ನ ಸಹಜ ಬದುಕಿನ ನಂಬಿಕೆಯನ್ನು ಸಾದರ ಪಡಿಸಲು ಸಾಹಸಕ್ಕೆ ಮುಂದಾದಂತಿದೆ. ಸಹಜತೆಯನ್ನು ಪ್ರಶ್ನಾರ್ಹವಾಗಿ ಕಾಣುವ ಸಂಧರ್ಭದ ಚಿತ್ರಣವಿದೆ.

ಆಧುನಿಕ ದಂಪತಿಗಳು ತಮ್ಮ ದಾಂಪತ್ಯದಲ್ಲಿ ಹೆಚ್ಚು ನಾಗರೀಕರಾಗಿ ಈ ಘಟನೆಯನ್ನು ತಮ್ಮ ತಮ್ಮ ಮೌನಗಳಲ್ಲಿಯೇ ಬಗೆಯರಿಸಿಕೊಳ್ಳ ತೊಡಗುವ ಬಗೆ ಹೆಚ್ಚು ಮಾನಸಿಕ ಅಂತರದ ಕ್ರಿಯೆಯಾಗಿದೆ. ಇಲ್ಲಿ ಆಧುನಿಕತೆಯ ಕೃತಕತೆ “ಆ ದಿಬ್ಬದ ಒಂದು ಭಾಗದಿಂದ ಇನ್ನೊಂದು ಭಾಗದವರೆಗೂ ನೆಲವನ್ನು ಸಮತಟ್ಟು ಮಾಡಿದ್ದು, ಆ ಮೂಲಕ ರಭಸವಾಗಿ ನೀರು ಹರಿಯುವ ವ್ಯವಸ್ಥೆಯನ್ನು ಮಾಡಿದ್ದರು. ಆ ನೀರು ಸುಮಾರು ನೂರು ಅಡಿ ಆಳದ ಪ್ರಪಾತಕ್ಕೆ ಬೀಳುವಂತೆ ಮಾಡಿ, ಕೃತಿಮ ಜಲಪಾತವನ್ನು ಸೃಷ್ಟಿಸಿದ್ದರು. ಆ ಜಲಪಾತವನ್ನು ಮತ್ತು ರಭಸದ ನೀರನ್ನು ಅವನು ಆಳವಾಗಿ ದಿಟ್ಟಿಸಿದರೂ ಅವನ ನೋಟ ಬೇರೆಡೆ ಇತ್ತು. ಅವನ ಮನದ ಭಿನ್ನ ಗತಿಗೆ ಪ್ರಕೃತಿಯೂ ಕೂಡ ಯಾವ ಸಂಚಲನೆಯನ್ನು ಕೂಡ ತೋರುತ್ತಿರಲಿಲ್ಲ. ಅವನು ತೀರ ಘಾಸಿಗೊಂಡ ಮನದಿಂದ ಪ್ರಪಾತದ ಬಳಿ ಸಾಗತೊಡಗಿ”ದಂತೆ ವ್ಯಕ್ತವಾಗಿದೆ.

ನಿಖಿಲ್ ಹಾಗೂ ನಿಹಾರಿಕ ತಮಗೆ ಜನಿಸುವ ಮಗುವು ಹೇಗಿರಬೇಕು, ಏನಾಗಬೇಕು ಎಂದು ಪೂರ್ವಭಾವಿಯಾಗಿ ನಿರ್ಧರಿಸಿದ ನಡೆ ಆಧುನಿಕತೆ ತಂದ ವಿಶ್ವಾಸವಾಗಿದೆ. ಜೆನೆಟಿಕ್ ತಂತ್ರಜ್ಞಾನದ ಮೂಲಕವಾಗಿ ಮಕ್ಕಳನ್ನು ಪಡೆಯುವ ನಿರ್ಧಾರವನ್ನು ತಮ್ಮ ಜವಾಬ್ದಾರಿಯೆಂದೇ ಭಾವಿಸಿದ್ದಾರೆ. ನಿಖಿಲ್ ಪತ್ರಿಕಾ ಸಂದರ್ಶನದಲ್ಲಿ "ನಾವು ಬದಲಾಗುತ್ತಿರುವ ಸಮಾಜದ ಗತಿಯೊಡನೆ ಹೆಜ್ಜೆ ಇಡಬೇಕು. ಆರೋಗ್ಯವಂತ ಮತ್ತು ಪ್ರತಿಭಾನ್ವಿತ ಪೀಳಿಗೆಗೆ ಜನ್ಮಕೊಡುವ ಜವಾಬುದಾರಿ ನಮ್ಮ ಮೇಲೆ ಇದೆ. ಈ ಮಗು ಹೆಣ್ಣಾಗಿರಬೇಕು, ಕಾಯಿಲೆಗಳಿಂದ ಮುಕ್ತವಾಗಿರುವ ಜೀನ್ಸ್ ಹೊಂದಿರಬೇಕು ಹಾಗೂ ಆಕೆ ಪ್ರತಿಭಾನ್ವಿತ ಲೇಖಕಿಯಾಗಲು ಅಗತ್ಯವಿರುವ ವಂಶವಾಹಿಯನ್ನು ಹೊಂದಿರಬೇಕೆಂದು ನಾನು ಮತ್ತು ನನ್ನ ಪತ್ನಿ ನಿಹಾರಿಕಾ ನಿರ್ಧರಿಸಿದ್ದೆವು" ಎಂಬಲ್ಲಿ, ಆಧುನಿಕತೆಯ ಮುಖಾಂತರ ಪೀಳಿಗೆಯನ್ನು ಸುಧಾರಿಸುವ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸಿರುವ ಹೆಮ್ಮೆ ಕಾಣಬಹುದು. ಹೆಣ್ಣು ಭ್ರೂಣವನ್ನು ಭೂಮಿಗೆ ಬರದಂತೆ ತಡೆಯುವ ಹಾಗೂ ಹುಟ್ಟುವ ಮಗುವು ಹೀಗೆ ಗುರುತಿಸಿಕೊಳ್ಳಬೇಕೆಂದು ನಿರ್ಧರಿಸುವುದರ ನಡುವೆ ಹೆಚ್ಚು ವ್ಯತ್ಯಾಸವಿದೆಯೇ? ಎಂಬ ಪ್ರಶ್ನೆ ಅನಿವಾರ್ಯವಾಗಿದೆ. ಮಾನವನ ಮುಷ್ಠಿಯಲ್ಲಿಯೇ ಸೃಷ್ಟಿಯೆಂಬ ಆಧುನಿಕತೆ ಧೋರಣೆ ಮಾನವನಲ್ಲಿ ಸ್ಥಾಪಿಸಿದಂತೆ ತೋರುತ್ತದೆ. ಆಧುನಿಕತೆಯ ಬೆನ್ನತ್ತಿ ಮನುಷ್ಯ ಸೃಷ್ಟೀಕರ್ತನಾಗಿ ಬೀಗುತ್ತಿರುವ, ಆ ಎಡೆಗೆ ಸಾಗುತ್ತಿರುವ ಸೂಚನೆಯನ್ನು ಗ್ರಹಿಸುತ್ತಾರೆ.

"ಕಾಲಕ್ಕೆ ಅನುಗುಣವಾಗಿ ಎಲ್ಲರಂತೆ ನಡೆದುಕೊಳ್ಳಬೇಕಾದುದು ಅಗತ್ಯ"ವೆಂದೇ ನಂಬಿದ್ದ ಅಮರ್ ಹಾಗೂ "ನಾವು ಬದಲಾಗುತ್ತಿರುವ ಸಮಾಜದ ಗತಿಯೊಡನೆ ಹೆಜ್ಜೆ ಇಡಬೇಕು" ಎಂಬ ನಿಖಿಲರ ಆಧುನಿಕತೆಯ ಗ್ರಹಿಕೆಯಲ್ಲಿ ವ್ಯತ್ಯಾಸವಿದೆ. ಅಮರ್‌ನ ತನ್ನಂತೆ ಸಹಜ ಕಣ್ಣು, ಮೂಗು, ನೀತಿಯಂತೆ ಸೊಂಪಾದ ಕೂದಲು, ಆರೋಗ್ಯವನ್ನು ಹೊಂದಿರುವ, ನಾರ್ಮಲ್ ಹೆರಿಗೆಯ ಬದಲಾಗಿ ಅಪರೇಷನ್ ಮೂಲಕ ಹೆರಿಗೆಯ ಹಂತದ್ದು. ನಿಖಿಲ್‌ನ ಆಧುನಿಕತೆ ತಾನು ಜೈವಿಕವಾಗಿ ಮಗುವಿನ ತಂದೆಯಾಗದಿದ್ದರೂ ಕಾನೂನು ತಂದೆಯಾಗಿರುವುದರಲ್ಲಿಯೇ ಹೆಮ್ಮೆ ಪಡುವಂತಹದ್ದು. ಆಧುನಿಕತೆಯು ಸಮಾಜದ ಮೂಲಭೂತ ಗ್ರಹಿಕೆಯ ವ್ಯಾಖ್ಯೆಗಳನ್ನು ಬದಲಾಯಿಸುತ್ತಿರುವ ಯತ್ನವಾಗಿ ನಿರೂಪಕರು ಗುರುತಿಸಿದ್ದಾರೆ.

### 3. ಆಧುನಿಕತೆ : ಮಹಿಳೆಯ ಅಂತರಂಗದ ಗಟ್ಟಿ ದನಿ

ಹೆಣ್ಣು ಹದ್ದು ತನ್ನ ಸಂಗಾತಿಯನ್ನು ಆರಿಸಿಕೊಳ್ಳುವಾಗ ಸವಾಲುಗಳನ್ನು ಒಡ್ಡುತ್ತದೆ. ಅದರಲ್ಲಿ ಜಯಗಳಿಸಿದ ಗಂಡು ಹದ್ದನ್ನು ತನ್ನ ಸಂಗಾತಿಯನ್ನಾಗಿ ಸ್ವೀಕರಿಸುತ್ತದೆ. ಈ ಸವಾಲು ಗಂಡು ಹದ್ದು ಬದುಕಿನ ಮುಂದಿನ ಸವಾಲುಗಳನ್ನು ಹೆದುರಿಸಬಲ್ಲದೋ? ಇಲ್ಲವೋ? ಎಂದು ಹೆಣ್ಣು ಹದ್ದು ಪರೀಕ್ಷಿಸುವ ಬಗೆಯದ್ದಾಗಿರುತ್ತದೆ. ಹೀಗೆ ಪರೀಕ್ಷಿಸುವ ಆಯ್ಕೆ ಹೆಣ್ಣಿಗಿದೆಯೇ? ಎಂದು ಪ್ರಶ್ನಿಸಿಕೊಂಡರೆ ಇಲ್ಲವೆನ್ನುವಷ್ಟು ಕಡಿಮೆ ಎಂದೆನಿಸದಿರದು.

ಸಂಗಾತಿಯ ದೌರ್ಬಲ್ಯಗಳನ್ನು ಪೂರ್ಣಗೊಳಿಸಲು 'ಆಧುನಿಕತೆ' ಒಂದು ಮಾರ್ಗವಾಗಿ, ಸಾಧನ ಸಾಮಗ್ರಿಯಾಗಿ ಅಸ್ತಿತ್ವವನ್ನು ಪಡೆದಿದೆ. ನಿಖಿಲ್, ನಿಹಾರಿಕಾ

‘ಡಿಸ್ಸೆನರಿ ಬೇಬಿ’ಯನ್ನು ಪಡೆಯಲು ನಿರ್ಧರಿಸಿರುವಿಕೆ, ನಿಖಿಲ್ ತಾನು ಈ ಮಗುವಿಗೆ ಜೈವಿಕ ತಂದೆಯಲ್ಲವೆಂದು ಒಪ್ಪಿಕೊಳ್ಳುತ್ತಲೇ, ಕಾನೂನು ತಂದೆಯಾಗಿರುವುದರಲ್ಲೆ ಹೆಮ್ಮೆಪಡುವುದು. ನೀತಿ, ಅಮರ್‌ನ ವಂಶವಾಹಿನಿಯ ಹಾಗೂ ಮಾನಸಿಕ ಸ್ಥಿತಿಗಳನ್ನು ಅರಿತು ಸಂಭಾಳಿಸಿಕೊಂಡು ಹೋಗಲು ನಿರ್ಧರಿಸುವಿಕೆ, ವೈದ್ಯಕೀಯ ನೆರವಿನಿಂದ ಅಮರ್‌ನ ಆರೋಗ್ಯ ಬಿಗಡಾಯಿಸದಂತೆ ವ್ಯವಸ್ಥೆಗೊಳಿಸುವಿಕೆ, ಇಲ್ಲೆಲ್ಲ ಆಧುನಿಕತೆ ಒಂದು ವರದಾನವೆಂಬ ಗ್ರಹಿಕೆಯನ್ನುಳಿಸಿದೆ.

ಅಮರ್‌ನ ವ್ಯಕ್ತಿತ್ವವನ್ನು ಗ್ರಹಿಸಿದಾಗ ತಂದೆ ಇಲ್ಲದಿರುವಿಕೆ ಅವನನ್ನು ಅತಿಯಾಗಿ ಕುಗ್ಗಿಸಿದೆ. ತಾಯಿಯ ಅಪಾರ ಪ್ರೀತಿ, ವಾತ್ಸಲ್ಯ, ಬೆಂಬಲ, ಎಲ್ಲ ಇದ್ದಾಗ್ಯೂ ತಂದೆ ಯಾರೆಂಬುದೇ ತಿಳಿಯದ ಸ್ಥಿತಿ ಅವನನ್ನು ಮಾನಸಿಕವಾಗಿ ಭಾದಿಸಿದೆ. ಅಮರ್‌ನ ತಂದೆಯ ಕುರಿತ ಪ್ರಶ್ನೆಗೆ ವಸಂತಿ ಹೆಣ್ಣು ಹದ್ದಿನ ಸ್ವಯಂವರದ ಕತೆಯ ಮೂಲಕ ಪ್ರಶ್ನೆಗೆ ಉತ್ತರಿಸುವಳು. ಈ ಕತೆ “...ಅದು ನಿನ್ನ ಕತೆಯಾಗಿರಬಹುದು... ನಿನ್ನ ತಂದೆಯ ಕತೆಯಾಗಿರಬಹುದು... ಅಥವಾ ಇಡೀ ಮನುಕುಲದ ಚರಿತ್ರೆಯಾಗಿರಬಹುದು. ಮಹಿಳೆಯೊಬ್ಬಳ ಅಂತರಂಗದ ಗರ್ಭದ ಗಟ್ಟಿ ದನಿಯಾಗಿರಬಹುದು...” ಹೀಗೆ ತನಗೆ ತಾನೇ ಮನದಲ್ಲಿ ಉತ್ತರಿಸಿಕೊಂಡಳು. ಹೆಣ್ಣು ಹದ್ದು ತನ್ನ ಮರಿಗಳಿಗಾಗಿ ಬದುಕ ಬೇಕಿದೆ, ಆಸರೆಯಾಗಿ ನಿಲ್ಲಬೇಕಿದೆ. ಸಂಗಾತಿ ಹದ್ದು ಹಾರಿಹೋಯಿತೆಂದು ಆಕೆ ಮರಿಯನ್ನು ತೊರೆವುದು ಅಸಾಧ್ಯವಾದುದು. ಹೆಣ್ಣು ಈ ತಾಯ್ತನವನ್ನು ಅದರ ಜಾವಾಬ್ದಾರಿಯನ್ನು ಅಪ್ಪಿ ಒಪ್ಪಿಕೊಂಡಿದ್ದಾಳೆ ಇದರಿಂದ ವಿಮುಖಗೊಳ್ಳುವುದು ಆಕೆಗೆ ಅಸಾಧ್ಯವಾದದು.

ಡಿನ್ನರ್ ಸ್ಟೇಯ್ನ್ ಗುರುತಿಸುವಂತೆ “ಹೆಣ್ಣಿನ ತಾಯ್ತನವನ್ನು ವೈಭವೀಕರಿಸುವ, ತನಗೆ ತಾನೇ ಶ್ರೇಷ್ಠಳೆಂದು ವಿಸ್ಮಿತವಾಗುವ ದೃಷ್ಟಿಕೋನಕ್ಕೆ ಪುರುಷರಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಏನೋ ಕೊರತೆ, ಅರಕೆ, ಅಪೂರ್ಣತೆ, ಕ್ಷುದ್ರತೆ, ದುಃಖಕಾರಕ ಗುಣಗಳೇ ಇರುವಂತೆ ತೋರುತ್ತದೆ. ಆದರೆ ಇದು ಒಂದು ರೀತಿಯ ಮಾನಸಿಕ ಹಪಾಹಪಿ ಹುಟ್ಟಿಸುವ ಅವಶ್ಯಕತೆಯ ಭಾವವಾಗಿರುತ್ತದೆ. ಈ ಮಾನಸಿಕ ಒತ್ತಡಗಳು ಪುರುಷರಲ್ಲಿ ‘ಮಾತೆ’ಯ ಬಗೆಗಿನ ನಿರೀಕ್ಷೆಗಳನ್ನೂ ಸ್ತ್ರೀಯರಲ್ಲಿ ಆ ಗುಣದ ಅಭಾವದ ಅರಿವಿನಿಂದ ಹುಟ್ಟುವ ಅಪರಾಧಿ ಪ್ರಜ್ಞೆಯನ್ನೂ ಸೃಷ್ಟಿಸುತ್ತದೆ” ಈ ಅಭಿಪ್ರಾಯವು ಪಿತೃಪ್ರಧಾನ ವ್ಯವಸ್ಥೆ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡರ ‘ಮಾತೃತ್ವ’ದ ವೈಭವೀಕರಣಗಳೂ ಪ್ರಶ್ನಾರ್ಹವೆಂಬುದನ್ನು ಸ್ಪಷ್ಟಪಡಿಸುತ್ತದೆ.

‘ಹೆಣ್ಣು ಹದ್ದಿನ ಸ್ವಯಂವರ’ ಆಧುನಿಕತೆಯಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಬಗೆ, ಪಿತೃಪ್ರಧಾನ ವ್ಯವಸ್ಥೆ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡರ ‘ಮಾತೃತ್ವ’ದ ವೈಭವೀಕರಣವನ್ನು ದಾಖಲಿಸುವ ನೋಟವಾಗಿಯೇ ಕಂಡಿದೆ.

## ಆಕರ ಗ್ರಂಥ:

1. ಬಾನು ಮುಶ್ತಾಕ್. (2023). ಹೆಣ್ಣು ಹದ್ದಿನ ಸ್ವಯಂವರ (ಕ.ಸಂ). ಅಭಿರುಚಿ ಪ್ರಕಾಶನ. ಮೈಸೂರು.

## ಪರಾಮರ್ಶನ ಗ್ರಂಥಗಳು:

1. ಸುಮಿತ್ರಾಬಾಯಿ ಬಿ. ಎನ್. (2018). ಸ್ತ್ರೀವಾದ-ಒಂದು ಅವಲೋಕನ. ಅಹರ್ನಿಶಿ ಪ್ರಕಾಶನ. ಶಿವಮೊಗ್ಗ.
2. ತೇಜಸ್ವಿನಿ ನಿರಂಜನ & ಸೀಮಂತಿನಿ ನಿರಂಜನ. (1994) ಸ್ತ್ರೀವಾದಿ ಸಾಹಿತ್ಯ ವಿಮರ್ಶೆ. ಕ್ರೈಸ್ಟ್ ಕಾಲೇಜು ಕನ್ನಡ ಸಂಘ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.